**ಅಸಲು ದಾವಾ ನಂ:119/2013**
**ಡಿ.ಡಬ್ಲ್ಯೂ: 01**

**ದಿನಾಂಕ: 08-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಟಿ.ಟಿ. ವಾದಿ ಪರ ವಕೀಲರಿಂದ**

ಸರ್ವೇ ನಂ.28/2 ರ ಜಮೀನು ತಿಮ್ಮಾರೆಡ್ಡಿಯವರ ಹೆಂಡತಿ ಅನಂತಮ್ಮ ರವರ ಹೆಸರಿಗೆ ಬಂದಿರುತ್ತದೆ. ಸದರಿ ಜಮೀನನ್ನು ತಿಮ್ಮಾರೆಡ್ಡಿಯವರು ಮನೆಯ ಯಜಮಾನರಾಗಿದ್ದ ಅನಂತಮ್ಮರವರ ಹೆಸರಿನಲ್ಲಿ ಖರೀದಿಸಿರುತ್ತಾರೆ. ಲಿಖಿತ ಹೇಳಿಕೆಯನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಲಿಖಿತ ಹೇಳಿಕೆಯಲ್ಲಿ ತಿಮ್ಮಾರೆಡ್ಡಿಯವರು ಮನೆಯ ಯಜಮಾನರಾಗಿದ್ದಾಗ ಭಾಗ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಅನಂತಮ್ಮರವರ ಹೆಸರಿನಲ್ಲಿ ಸರ್ವೇ ನಂ.28/2 ರ ಜಮೀನನ್ನು ಖರೀದಿಸಿದ್ದರು ಎಂದು ನಮೂದಿಸಿರುತ್ತೇನೆ. ಸದರಿ ವಿಚಾರವನ್ನು ಲಿಖಿತ ಹೇಳಿಕೆಯಲ್ಲಿ ನಮೂದಿಸಿದೆ ಇದ್ದರೂ ನಮೂದಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೇ ನಂ.28/3 ರ ಜಮೀನು ಗುರುಮೂರ್ತಿಯವರ ಕಡೆಯಿಂದ ತಿಮ್ಮಾರೆಡ್ಡಿ ಮತ್ತು ಅನಂತಮ್ಮರವರ ಹೆಸರಿಗೆ ಬಂದಿರುತ್ತದೆ. ಸರ್ವೇ ನಂ.28/2 ಮತ್ತು ಸರ್ವೇ ನಂ.28/3 ರ ಜಮೀನುಗಳು ತಿಮ್ಮಾರೆಡ್ಡಿಯಿಂದ ಅನಂತಮ್ಮರವರಿಗೆ ಬಂದಿರುವುದಿಲ್ಲ, ಅನಂತಮ್ಮರವರ ತವರು ಮನೆಯವರು ಆಕೆಗೆ ಖರೀದಿಸಿಕೊಟ್ಟಂತಹ ಜಮೀನುಗಳು ಆಗಿರುತ್ತವೆ ಎಂದರೆ ಸರಿಯಲ್ಲ. ದಿ:28-09-1991 ರಲ್ಲಿ ಗುರುಸಿದ್ದಮೂರ್ತಿಯವರಿಂದ ಅನಂತಮ್ಮರವರು ಖರೀದಿಸಿದ ಜಮೀನಗಳು ಎಂದರೆ ಸರಿ. ಅನಂತಮ್ಮರವರು ಜೀವಿತ ಇರುವವರೆಗೂ ತಾವೇ ಸದರಿ ಜಮೀನುಗಳಿಗೆ ಕಂದಾಯ ಪಾವತಿಸುತ್ತಾ ಬಂದಿರುತ್ತಾರೆ ಎಂದರೆ ಸರಿ.

ಅನಂತಮ್ಮರವರ ಮರಣಾನಂತರ ಆಕೆಯ ವಾರಸುದಾರರಾದ ವಾದಿಯರು ಪೌತಿ ಖಾತೆ ಮಾಡಿಸಿಕೊಂಡು ಹಕ್ಕು ಅಧಿಕಾರ ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸರಿ. ಸದರಿ ಎರಡು ಜಮೀನುಗಳು ಅನಂತಮ್ಮರವರ ಸ್ವಯಾರ್ಜಿತ ಆಸ್ತಿಯಾಗಿದ್ದು ಒಟ್ಟು ಕುಟುಂಬದ ಆಸ್ತಿಯಲ್ಲ ಎಂದರೆ ಸರಿಯಲ್ಲ. ಅನಂತಮ್ಮರವರಿಗೆ ಸೇರಿದ ಜಮೀನಿನಲ್ಲಿ ಅವರೇ ಸ್ವಾಧೀನಾನುಭವದಲ್ಲಿದ್ದು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ.

ಸರ್ವೇ ನಂ.1/28 ರ ಜಮೀನು ಗುರುಸಿದ್ದಮೂರ್ತಿಯವರ ಕಡೆಯಿಂದ ತಿಮ್ಮಾರೆಡ್ಡಿ ಮತ್ತು ಅನಂತಮ್ಮರವರ ಹೆಸರಿಗೆ ಬಂದಿರುತ್ತದೆ. ಸರ್ವೇ ನಂ.1/28 ಅನಂತಮ್ಮ ಒಬ್ಬರಿಗೆ ಬಂದತಹ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.1/28 ರ ಜಮೀನಿನ ವಿಸ್ತೀರ್ಣ

8 ಎಕರೆ 20 ಗುಂಟೆ ಇರುತ್ತದೆ. ಸದರಿ ಜಮೀನನ್ನು ವಾದಿಯರು ಪೌತಿ ಖಾತೆ ಮಾಡಿಸಿಕೊಂಡಿರುತ್ತಾರೆ. ಸರ್ವೇ ನಂ.1/28 ರ ಜಮೀನಿನ ವಿಸ್ತೀರ್ಣ 8 ಎಕರೆ 20 ಗುಂಟೆ ಇರುವುದು ಸುಳ್ಳು ಎಂದರೆ ಸರಿಯಲ್ಲ. ಸರ್ವೇ ನಂ.1/28 ರಲ್ಲಿ ಜಮೀನಿನ ವಿಸ್ತೀರ್ಣ 4 ಎಕರೆ ಎಂದರೆ ಸಾಕ್ಷಿಯು 4 ಎಕರೆ ವ್ಯವಸಾಯ ಮಾಡುತ್ತಿದ್ದು, ಉಳಿದ 4 ಎಕರೆಯನ್ನು ಬೀಳು ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಷಯವಾಗಿ ಸುಳ್ಳಾಗಿದ್ದು, ಸರ್ವೇ ನಂ.1/28 ರಲ್ಲಿ ಕೇವಲ 4 ಎಕರೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.1/28 ರ ಜಮೀನು ವಾದಿಯರ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.1/28 ರ 4 ಎಕರೆ ಜಮೀನು ಸಾಕಮ್ಮ ಕೋಂ ಕೆಂದಪ್ಪರವರ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. ಸರ್ವೇ ನಂ.28/2, ಸರ್ವೇ ನಂ.28/3 ಮತ್ತು ಸರ್ವೇ ನಂ.1/28 ಜಮೀನುಗಳು ಒಟ್ಟು ಕುಟುಂಬದ ಆಸ್ತಿಗಳು ಅಲ್ಲದೆ ಇದ್ದರೂ ಸದರಿ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಮಾಹಿತಿಯನ್ನು ಕೊಟ್ಟು ಸುಳ್ಳು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ವಾದಿಯರು ಸದರಿ ಜಮೀನುಗಳು ಅನಂತಮ್ಮರವರ ಸ್ವಯಾರ್ಜಿತ ಆಸ್ತಿಯಾದ ಕಾರಣ ಈ ದಾವಾದಲ್ಲಿ ಸೇರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿಃ2 ರ ಪತ್ರವನ್ನು ರಾಮಚಂದ್ರ ರೆಡ್ಡಿ, ಲಕ್ಷ್ಮಪ್ಪರೆಡ್ಡಿ ಹಾಗೂ ನಾನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪತ್ರದಲ್ಲಿ ಸರ್ವೇ ನಂ.39 ನ್ನು ಹೊರತುಪಡಿಸಿ ಬೇರೆ ಯಾವ ಜಮೀನುಗಳನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ರಾಮಚಂದ್ರರೆಡ್ಡಿ, ಲಕ್ಷ್ಮಪ್ಪರೆಡ್ಡಿ ಹಾಗೂ ನನ್ನನ್ನು ಹೊರತುಪಡಿಸಿ ಇಬ್ಬರು ಅಣ್ಣಂದಿರಾದ ಗೋವಿಂದರೆಡ್ಡಿ, ತಿಮ್ಮಾರೆಡ್ಡಿ ಹಾಗೂ ಅಕ್ಕ ನಿಂಗಮ್ಮ, ತಂಗಿ ಸರೋಜಮ್ಮ ಇರುತ್ತಾರೆ ಎಂದರೆ ಸರಿ. ಸರ್ವೇ ನಂ.39 ರಲ್ಲಿ ಇವರಿಗೂ ಸಹ ಭಾಗ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಸರ್ವೇ ನಂ.39 ನ್ನು ನನ್ನ ಮದುವೆಯ ಇಡಿಗಾಗಿ ನನಗೆ ಮತ್ತು ನನ್ನ ತಂಗಿ ಸರೋಜಮ್ಮಳಿಗೆ ನೀಡಲಾಗಿರುತ್ತದೆ. ಸದರಿ ಆಸ್ತಿಯಲ್ಲಿ ನನ್ನ ಅಣ್ಣ ತಮ್ಮಂದಿರಿಗೆ ಯಾವುದೇ ಭಾಗ ಇರುವುದಿಲ್ಲ. ಸದರಿ ವಿಚಾರವನ್ನು ನಿಡಿಃ2 ರಲ್ಲಿ ನಮೂದಿಸಲಾಗಿರುತ್ತದೆ. ಸದರಿ ಅಂಶಗಳನ್ನು ನಿಡಿಃ2 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. 1991 ರಲ್ಲಿ ಗೋವಿಂದರೆಡ್ಡಿ ಹಾಗೂ ತಿಮ್ಮಾರೆಡ್ಡಿ ಜೀವಂತವಾಗಿರಲಿಲ್ಲ.

ನಿಡಿಃ2 ನ್ನು ವಾದಿಯರಿಗೆ ತಿಳಿಯದಂತೆ ನಾನು, ರಾಮಚಂದ್ರ ರೆಡ್ಡಿ, ಲಕ್ಷ್ಮಪ್ಪರೆಡ್ಡಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಹಾಗೂ ನನ್ನ ತಂಗಿ ಸರೋಜಮ್ಮಳಿಗೆ ಮದುವೆ ಇಡಿಗಾಗಿ ಸರ್ವೇ ನಂ.39 ನ್ನು ಕೊಟ್ಟಿರುವುದಕ್ಕೆ ದಾಖಲಾತಿ ಇರುತ್ತದೆ. ಸದರಿ ದಾಖಲೆಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವಿಷಯವಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.39 ನ್ನು ಮತ್ತು ಸರ್ವೇ ನಂ.56 ರ ಜಮೀನುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನುಗಳು ನಮ್ಮ ತಂದೆಗೆ ಇರುವುದಿಲ್ಲ. ಸರ್ವೇ ನಂ.56 ಕ್ಷೇತ್ರ 3 ಎಕರೆ 35 ಗುಂಟೆ ಇರುತ್ತದೆ. ಗೋವಿಂದರೆಡ್ಡಿ ಹಾಗೂ ತಿಮ್ಮಾರೆಡ್ಡಿಗೆ ಅಕ್ಷರ ಜ್ಞಾನ ಇರಲಿಲ್ಲ ಎಂದರೆ ಸಾಕ್ಷಿಯು ಓದು ಬರಹ ಬರುತ್ತಿರಲಿಲ್ಲ, ಸಹಿಯನ್ನು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು 7 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ರಾಮಚಂದ್ರ ರೆಡ್ಡಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಲಕ್ಷ್ಮಪ್ಪರೆಡ್ಡಿಯವರು ಸರಕಾರಿ ನೌಕರರಾಗಿ, ಡಿ.ಸಿ.ಸಿ. ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಎಲ್ಲಿಯವರೆಗೆ ವ್ಯಾಸಂಗ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಪ್ಪರೆಡ್ಡಿಯವರಿಗೆ ರಾಜಕೀಯ ವ್ಯಕ್ತಿಗಳು ಹಾಗೂ ಕಂದಾಯ ಅಧಿಕಾರಿಗಳೊಂದಿಗೆ ಒಡನಾಟ ಇತ್ತು ಎಂದರೆ ಸರಿಯಲ್ಲ. ನಾನು, ಲಕ್ಷ್ಮಪ್ಪರೆಡ್ಡಿ, ರಾಮಚಂದ್ರರೆಡ್ಡಿಯವರು ವಾದಿಯರಿಗೆ ಜಮೀನುಗಳು ಸೇರಬಾರದು ಎಂಬ ಉದ್ದೇಶದಿಂದ, ವಾದಿಯರಿಗೆ ತಿಳಿಯದಂತೆ ನಿಡಿಃ2 ರಂತೆ ಸುಳ್ಳು ಪಾಲುವಿಭಾಗವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ವಾದಿಯರಿಗೆ ಗೊತ್ತಾಗದಂತೆ ಕಂದಾಯ ಅಧಿಕಾರಿಗಳೊಂದಿಗೆ ಷರೀಕಾಗಿ ಖಾತೆಗಳನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಿಡಿಃ55 ನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದವರೊಂದಿಗೆ ನಾನು, ಲಕ್ಷ್ಮಪ್ಪರೆಡ್ಡಿ, ರಾಮಚಂದ್ರ ರೆಡ್ಡಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಆಸ್ತಿಗಳಾಗಿದ್ದು ವಾದಿಯರಿಗೂ ಹಿಸ್ಸಾ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಯರ ಹಿಸ್ಸೆಯನ್ನು ಲಪಟಾಯಿಸುವ ನಾನು, ಲಕ್ಷ್ಮಪ್ಪರೆಡ್ಡಿ, ರಾಮಚಂದ್ರರೆಡ್ಡಿಯವರು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಲವು ದಾಖಲೆಗಳನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿರುವ ಅಂಶಗಳು ನನಗೆ ನೆನಪಿಲ್ಲ. ನನ್ನ ವಕೀಲರ ಮೂಲಕ ಓದಿ ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು ಎಂದೂ ಓದಿಕೊಂಡಿರುವುದಿಲ್ಲ ಹಾಗೂ ವಕೀಲರನ್ನು ಕೇಳಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.